ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

3

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ತು

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE: 13/4/21

# ಸದನ ಸಮಿತಿ ಅಸ್ತಿತ್ವದ ಗೊಂದಲ

ವಿ.ವಾ. 13-4-21

**ನಾವು ಮಧ್ಯಂತರ ವರದಿಯನ್ನಷ್ಟೆ ಕೊಟ್ಟಿದ್ದು, ಅಂತಿಮ ವರದಿ ನೀಡಲು ಯುಗಾದಿ ಕಳೆದ ಬಳಿಕ ಸಭೆ ನಡೆಸುತ್ತೇವೆ. ಸಾರ್ವಜನಿಕರ ಅರ್ಜಿಗಳು ಇರುವುದರಿಂದ ಆ ಬಗ್ಗೆ ವಿಚಾರಣೆ ಮಾಡುತ್ತೇವೆ. ಶಾಸಕರ ಅಭಿಪ್ರಾಯ ಪಡೆದು ಅಂತಿಮ ವರದಿ ಸಲ್ಲಿಸುತ್ತೇವೆ.**

**| ಮರಿತಿಬ್ಬೇಗೌಡ** ಸದನ ಸಮಿತಿ ಅಧ್ಯಕ್ಷ

**ಬೆಂಗಳೂರು:** ವಿಧಾನ ಪರಿಷತ್‌ನಲ್ಲಿ ಡಿ.15ರಂದು ಸಭಾಪತಿ ಪೀಠಕ್ಕೆ ಅಗೌರವ ಉಂಟು ಮಾಡಿದ್ದ ಘಟನಾವಳಿಗಳ ಬಗ್ಗೆ ತನಿಖೆ ನಡೆಸಿ ಮಧ್ಯಂತರ ವರದಿ ಮಂಡನೆ ಮಾಡಿರುವ ಮರಿತಿಬ್ಬೇಗೌಡ ನೇತೃತ್ವದ ಸದನ ಸಮಿತಿ ಅಸ್ತಿತ್ವದ ಪ್ರಶ್ನೆ ಮುನ್ನೆಲೆಗೆ ಬಂದಿದೆ. ಅಂತಿಮ ವರದಿ ನೀಡುವ ತನಕ ಈ ಸಮಿತಿ ಮುಂದುವರಿಯಲಿದೆಯೋ ಅಥವಾ ಹೊಸ ಸದಸ್ಯರನ್ನು ಸೇರಿಸಿ ಸಮಿತಿ ಮರುರಚನೆ ಮಾಡಬೇಕಾ? ಎನ್ನುವ ಗೊಂದಲಕ್ಕೆ ಇನ್ನು ಪರಿಹಾರ ಸಿಕ್ಕಿಲ್ಲ.

**» ಸಭಾಪತಿ ಪೀಠಕ್ಕೆ ಅಗೌರವ ಪ್ರಕರಣ**

ಸದನ ಸಮಿತಿ ಸಂವಿಧಾನಾತ್ಮಕವಾಗಿ ರಚನೆಯಾಗಿದ್ದು, ಕೋರಂ ಇರುವುದರಿಂದ ಸಭೆ ನಡೆಸಬಹುದು. ಅಂತಿಮ ವರದಿ ಸಲ್ಲಿಕೆಗೆ ಈ ಹಿಂದೆ ಇದ್ದ ಸಭಾಪತಿ ಪ್ರತಾಪಚಂದ್ರ ಶೆಟ್ಟಿ 3 ತಿಂಗಳ ಕಾಲಾವಕಾಶ ನೀಡಿರುವ ಕಾರಣ ಅಲ್ಲಿಯ ತನಕ ಸದನ ಸಮಿತಿ ಅತ್ವದಲ್ಲಿರಲಿದೆ ಎಂಬ ವಾದ ಒಂದೆಡೆಯಾದರೆ, ಈಗಾಗಲೆ ಸದನಕ್ಕೆ ಮಧ್ಯಂತರ ವರದಿಯನ್ನು ನೀಡಿರುವ ಹಿನ್ನೆಲೆಯಲ್ಲಿ ಅದು ಸರ್ಕಾರದ ಆಸ್ತಿಯಾಗಿದೆ. ಸದನ ಸಮಿತಿ ಕೆಲಸವೂ ಮುಗಿದಿದೆ. ಈ ಸಮಿತಿ ಮುಂದುವರಿಯಬೇಕೆ? ಬೇಡವೇ? ಎನ್ನುವ ಬಗ್ಗೆ ಸದನ ತೀರ್ಮಾನ ತೆಗೆದುಕೊಳ್ಳಬೇಕಿದೆ ಎಂಬ ಪ್ರತಿವಾದ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಎಲ್ಲವೂ ಗೊಂದಲದಲ್ಲಿದೆ.

**ಸಮಿತಿಯಲ್ಲಿ ಯಾರ್‍ಯಾರಿದ್ದಾರೆ?:** ಜೆಡಿಎಸ್‌ನ ಮರಿತಿಬ್ಬೇಗೌಡ, ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್, ಆರ್.ಬಿ. ತಿಮ್ಮಾಪುರ, ಬಿಜೆಪಿಯ ಎಚ್. ವಿಶ್ವನಾಥ್ ಮತ್ತು ಎಸ್.ವಿ.ಸಂಕನೂರ ಅವರನ್ನು ನೇಮಕ ಮಾಡಿ ಹಿಂದಿನ ಸಭಾಪತಿ ಪ್ರತಾಪಚಂದ್ರ ಶೆಟ್ಟಿ ಆದೇಶಿಸಿದ್ದರು. ಆದರೆ, ಈ ಬಿಜೆಪಿಯ ಎಚ್.ವಿಶ್ವನಾಥ್ ಮತ್ತು ಎಸ್.ವಿ.ಸಂಕನೂರ ಅವರು ರಾಜೀನಾಮೆ ನೀಡಿದ್ದಾರೆ. ಮೂವರು ಸದಸ್ಯರು ಮಾತ್ರ ಸಮಿತಿಯಲ್ಲಿದ್ದಾರೆ.